# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 512
ಸದಸ್ಯರ ಹೆಸರು : ಶ್ರೀ. ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 12.12.2024
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಇತ್ತೀಚೆಗೆ ಸಂಭವಿಸಿದ ತುಂಗಭದ್ರಾ ಜಲಾಶಯ ಅವಘಡವು ಪುನಃ ಸಂಭವಿಸದಂತೆ ರಾಜ್ಯ ಸರ್ಕಾರ ಕೈಗೊಂಡಿರುವ ಮುನ್ನೆಚರಿಕೆ ಕ್ರಮಗಳೇನು; | ತುಂಗಭದ್ರಾ ಯೋಜನೆಯು ಅಂತರ ರಾಜ್ಯ ಯೋಜನೆಯಾಗಿದ್ದು, ತುಂಗಭದ್ರಾ ಅಣೆಕಟ್ಟೆಯ ಗೇಟುಗಳ ನಿರ್ವಹಣೆಯು ತುಂಗಭದ್ರಾ ಮಂಡಳಿಯ ವ್ಯಾಪ್ತಿಯಲ್ಲಿರುತ್ತದೆ.<br><br>ದಿನಾಂಕ 10.08.2024 ರಂದು ತುಂಗಭದ್ರಾ ಜಲಾಶಯದ ಗೇಟ್ ನಂ.19 ರ ಚೈನ್ ಲಿಂಕ್ ವೈಫಲ್ಯದಿಂದ ಗೇಟಿನ ಭಾಗವು ನೀರಿನಲ್ಲಿ ಕೊಚ್ಚಿಹೋಗಿದ್ದರಿಂದ, ಸ್ಟಾಪ್‌ಲಾಗ್ ಗೇಟ್‌ನ್ನು ಅಳವಡಿಸಲಾಗಿರುತ್ತದೆ.<br><br>ಸದರಿ ಅಣೆಕಟ್ಟೆಯ ಕ್ರಸ್ಟ್‌ಗೇಟ್‌ಗಳನ್ನು ತುಂಗಭದ್ರಾ ಅಣೆಕಟ್ಟನ್ನು ನಿರ್ಮಿಸುವ ಸಮಯದಲ್ಲಿ ಅಳವಡಿಸಲಾಗಿದ್ದು, ಪ್ರಸ್ತುತ 70 ವರ್ಷ ಹಳೆಯದಾಗಿರುತ್ತದೆ. ಇವುಗಳ Comprehensive structural health check ಮಾಡುವ ಪ್ರಸ್ತಾವನೆಯು ತುಂಗಭದ್ರಾ ಮಂಡಳಿಯ ಪರಿಶೀಲನೆಯಲ್ಲಿದ್ದು, ವರದಿ ಪಡೆದ ನಂತರ ಅಗತ್ಯತೆಯನುಸಾರ ಹೊಸ ಗೇಟುಗಳನ್ನು ಅಳವಡಿಸುವ ಬಗ್ಗೆ ತುಂಗಭದ್ರಾ ಮಂಡಳಿಯಿಂದ ಕ್ರಮವಹಿಸಲಾಗುತ್ತದೆ. |
| (ಆ) | ಈ ಸಂಬಂಧ ರಾಜ್ಯದ ವಿವಿಧ ಜಲಾಶಯಗಳ ಸ್ಥಿತಿಗತಿಗಳನ್ನು ಸರ್ಕಾರ ಪರಿಶೀಲಿಸಿದೆಯೇ; | ರಾಜ್ಯದ ವಿವಿಧ ಅಣೆಕಟ್ಟುಗಳ ಸ್ಥಿತಿಗತಿಗಳನ್ನು ಪರಿಶೀಲಿಸಿ, ಸುರಕ್ಷತೆ ದೃಷ್ಟಿಯಿಂದ ಕೇಂದ್ರ ಜಲ ಆಯೋಗದ ಮಾರ್ಗಸೂಚಿಗಳಂತೆ ಕಾಲಕಾಲಕ್ಕೆ ರಾಜ್ಯದಲ್ಲಿನ ಅಣೆಕಟ್ಟುಗಳ ಪರಿವೀಕ್ಷಣೆಯನ್ನು ಕೈಗೊಂಡು ಸುರಕ್ಷತಾ ದೃಷ್ಟಿಯಿಂದ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಶಿಫಾರಸು ಮಾಡಲು ರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಕಾಯ್ದೆ 2021 ಜಾರಿಯಾಗುವ ಪೂರ್ವದಿಂದಲೂ, ರಾಜ್ಯದಲ್ಲಿ ಅಣೆಕಟ್ಟು ಸುರಕ್ಷತಾ ಪರಿಶೀಲನಾ ಸಮಿತಿ ಮತ್ತು ತಂಡಗಳು ((Dam safety Review Panel (DSRP) & Dam Safety Review Team (DSRT)) ಕಾರ್ಯನಿರ್ವಹಿಸುತ್ತಿವೆ.<br><br>ಸರ್ಕಾರದ ಆದೇಶ ದಿನಾಂಕ:13.08.2024ರಲ್ಲಿ, ರಾಷ್ಟ್ರೀಯ ಮಟ್ಟದ ತಜ್ಞರುಗಳನ್ನೊಳಗೊಂಡ ಅಣೆಕಟ್ಟು ಸುರಕ್ಷತಾ ಪರಿಶೀಲನಾ ಸಮಿತಿ(DSRP)ಯನ್ನು ಪುನರ್ ರಚಿಸಲಾಗಿರುತ್ತದೆ.<br><br>ಇದಲ್ಲದೆ, ರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಕಾಯ್ದೆ-2021ರನ್ವಯ, ರಾಜ್ಯದ 231 ನಿರ್ದಿಷ್ಟ ಪಡಿಸಿದ ಅಣೆಕಟ್ಟುಗಳ ಸುರಕ್ಷತಾ ಹಿತದೃಷ್ಟಿಯಿಂದ |
| (ಇ) | ಪರಿಶೀಲಿಸಿದಲ್ಲಿ, ಸರ್ಕಾರ ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳೇನು? | |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಯೋಜನಾಧಿಕಾರಿಗಳು ಪ್ರತಿ ವರ್ಷ Pre-Monsoon ಮತ್ತು Post-Monsoon ಪರಿವೀಕ್ಷಣೆಗಳನ್ನು ಕೈಗೊಳ್ಳುತ್ತಿದ್ದಾರೆ.<br><br>ಅಣೆಕಟ್ಟು ಸುರಕ್ಷತಾ ಪರಿಶೀಲನಾ ಸಮಿತಿ (DSRP), ಅಣೆಕಟ್ಟು ಸುರಕ್ಷತಾ ಪರಿಶೀಲನಾ ತಂಡ (DSRT) ಹಾಗೂ Pre-Monsoon ಮತ್ತು Post-Monsoon ಪರಿವೀಕ್ಷಣಾ ವರದಿಗಳನ್ವಯ ಕೈಗೊಳ್ಳಬೇಕಾದ ಕ್ರಮ ಮತ್ತು ವಾರ್ಷಿಕ ನಿರ್ವಹಣೆಯ ತುರ್ತು ದುರಸ್ತಿ ಕಾಮಗಾರಿಗಳನ್ನು ಅವುಗಳ ಆದ್ಯತೆಯನುಸಾರ ಅನುದಾನದ ಲಭ್ಯತೆ ಮೇರೆಗೆ ವಿಶ್ವಬ್ಯಾಂಕ್ ನೆರವಿನ ಅಣೆಕಟ್ಟು ಪುನಶ್ಚೇತನ ಮತ್ತು ಅಭಿವೃದ್ಧಿ ಯೋಜನೆ (Dam Rehabilitation and Improvement Project) ಹಾಗೂ ನಿಗಮಗಳಿಗೆ ಒದಗಿಸಲಾಗಿರುವ ಅನುದಾನದಡಿಯಲ್ಲಿ ಕೈಗೊಳ್ಳಲಾಗುತ್ತಿದೆ.<br><br>ಮುಂದುವರೆದು, ಸದರಿ ವರದಿಗಳನ್ವಯ ಕೈಗೊಂಡ ಕ್ರಮಗಳನ್ನು ರಾಜ್ಯ ಅಣೆಕಟ್ಟು ಸುರಕ್ಷತಾ ಸಮಿತಿ(SCDS)ಯ ಸಭೆಯಲ್ಲಿ ಮೇಲುಸ್ತುವಾರಿ ಮಾಡಲಾಗುತ್ತಿದ್ದು, ರಾಜ್ಯದ ಅಣೆಕಟ್ಟುಗಳ ಸುರಕ್ಷತೆಯ ಮಾನದಂಡಗಳನ್ನು ಕಾಪಾಡಿಕೊಳ್ಳಲು ಹಾಗೂ ಅಣೆಕಟ್ಟುಗಳ ವೈಫಲ್ಯಕ್ಕೆ ಸಂಬಂಧಿತ ವಿಪತ್ತುಗಳನ್ನು ತಡೆಗಟ್ಟಲು, ರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಪ್ರಾಧಿಕಾರ (NDSA) ಹೊರಡಿಸಿದ ಮಾರ್ಗಸೂಚಿಗಳು/ ಮಾನದಂಡಗಳು ಹಾಗೂ ಇತರೆ ನಿರ್ದೇಶನಗಳ ಪ್ರಕಾರ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಸಮಿತಿಯು ಶಿಫಾರಸು ಮಾಡುತ್ತಿದೆ. |

ಸಂಖ್ಯೆ:ಜಸಂಇ 137 ಎಂಎಲ್ಎ 2024

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ